**‘ಅವನು ಸರ್ಕಾರಕ್ಕೆ ಒಂದು ಅರ್ಜಿ ಕೊಡಬೇಕು. ಆದರೆ, ಅವನಿಗೆ ಸ್ವಂತ ವಿಳಾಸವೇ ಇಲ್ಲ. ರಸ್ತೆಯೇ ಮನೆ, ಫುಟ್‌ಪಾತಲ್ಲಿ ಮಲಗ್ತಾನೆ, ಅದಕ್ಕೆ ಅವನು ಯಾರದಾದರೂ ಮನೆ ವಿಳಾಸ ತಗೊಂಡು ಅರ್ಜಿ ಕೊಡ್ತಾನಂತೆ. ಎಂಥ ಜಗತ್ತು, ಇಷ್ಟು ಸಹಾಯ ಮಾಡೋಕೆ ಯಾರೂ ತಯಾರಿಲ್ಲ!’**

ನಿರ್ಲಕ್ಷ್ಯ ಮಾಡ್ತೀರಿ. ಆದರೆ, ನಾವು ಮಾಡೋಕಾಗೋಲ್ಲ. ಗೊತ್ತಾಯ್ತಾ?”

ಅಸಿತ್‌ಗೆ ನಾಚಿಕೆಯಾಯಿತು. ಅವನ ವಯಸ್ಸೂ ಚಿಕ್ಕದು, ಅವನದೂ ಬಿಸಿರಕ್ತಾನೆ! ಆದರೆ, ಅವನು ಈ ವಿಷಯವನ್ನು ನಿರ್ಲಕ್ಷ್ಯ ಮಾಡಲಾಗುತ್ತಿಲ್ಲ. ಬಹಳ ಹೆದರಿಕೆಯಾಗಿದೆ. ಇದ್ದಕ್ಕಿದ್ದಂತೆ ಬಾಬಾನ ಮೇಲೆ ಕೋಪ ಬಂತು. ಬಾಬಾ ಅಂತೂ ತನ್ನನ್ನ ಒಂದು ಮಗು ತರ ಬೆಳೆಸಿಬಿಟ್ಟಿದ್ದಾರೆ. ಬಾಬಾ ಮನೇಲಿ ಇಲ್ಲದೆ ಹೋದರೆ ಅಸಹಾಯಕತೆ ಆವರಿಸಿಕೊಳ್ಳುತ್ತದೆ. ಹೀಗೆ ಯೋಚಿಸಿದರೂ, ಎಳೆಮಗು ತರಾನೇ ಮಾತಾಡಿದ, “ಇನ್ನೊಂದು ವಿಷಯ ಸಾಧನ್ ಬಾಬು, ನಾನು ಗಮನಿಸಿದೆ. ಮನೆಯಲ್ಲಿ ಯಾರೂ ದೊಡ್ಡವರಿಲ್ಲದ ಸಮಯದಲ್ಲೇ ಹೀಗಾಗುತ್ತೆ. ವಿಶ್ವಾಸ್ ಮನೆಯಲ್ಲಿ ಇಲ್ಲದೆ ಇದ್ದಾಗ, ಹೊರಗೆ ಹೋಗಿದ್ದಾಗ ಅವರ ಮನೆ ಮೇಲೆ ಕಣ್ಣಿಟ್ಟಿದ್ದ, ಈಗ ನಮ್ಮ ಬಾಬಾ ಇಲ್ಲ, ಹೋದ ಕೂಡಲೇ...”

ಖಂಡಿತವಾಗಿಯೂ ಹೋದ ಕೂಡಲೇ ಅಲ್ಲ, ಸುಮಾರು ದಿನಗಳಿಂದ ಅಸಿತ್‌ನ ತಂದೆ ಕಾನ್ಪುರದಲ್ಲಿದ್ದಾರೆ. ಸಾಧನ್ ಬಾಬುಗೆ ಅದು ಗೊತ್ತು. ಹೇಳಿದರು, “ಹುಂ, ನಿಮ್ಮ ಬಾಬಾ ಅಂತೂ ಮಗಳ ಮನೆಯಲ್ಲಿ... ಯಾವಾಗ ಬರ್ತಾರೆ?”

“ರಜೆ ಮುಗಿಯೋತನಕ ಬರೋದಿಲ್ಲ ಅನಿಸುತ್ತೆ.”



“ಕಷ್ಟ!” ಸಾಧನ್ ಬಾಬು ಎಲೆಯಡಿಕೆ ಡಬ್ಬಿ ತೆಗೆದು ವಿಶ್ವಾಸ್‌ಗೆ ಒಂದು ಕೊಟ್ಟು ತಾವೊಂದು ಬಾಯಲ್ಲಿ ಹಾಕಿಕೊಂಡರು. ಅಸಿತ್ ಎಲೆಯಡಿಕೆ ತಿನ್ನುವುದಿಲ್ಲ. ಬಾಯೊಳಗಿನ ಎಲೆಯಡಿಕೆಯನ್ನು ಆಯಕಟ್ಟಿನ ಜಾಗಕ್ಕೆ ಕೂರಿಸುತ್ತಾ ಕೇಳಿದರು, “ವಿಶ್ವಾಸ್, ನಿಮ್ಮನೆ ಹತ್ತಿರ ಏನಾಯ್ತು? ಏನಾದರೂ ತೆಗೆದುಕೊಂಡು ಓಡಿಹೋಗಿದ್ದಾನಾ?”

“ಇಲ್ಲ ಇಲ್ಲ, ಅಂಥಾದ್ದೇನೂ ಆಗಲಿಲ್ಲ” ವಿಶ್ವಾಸ್ ಬಹಳ ಪ್ರಸನ್ನವದನನಾಗಿ ಬಹು ವಿಸ್ತಾರವಾಗಿ ಹೇಳಿದ್ದರ ಸಾರಾಂಶವೇನೆಂದರೆ... ವಿಶ್ವಾಸ್‌ನ ಅಕ್ಕನ ಮಗನೊಬ್ಬ ಸ್ವಲ್ಪ ಗೂಂಡಾತರಹದ ಜನ. ಅವನು ಒಂದು ದಿನ ಇವರ ಮನೆಗೆ ಬಂದಿದ್ದಾಗ ಈ ವಿಷಯ ಕೇಳಿ ಅವನ ಜೊತೆ ಮಾತಾಡಿದನಂತೆ, ‘ಹೋ ಹೋ, ಬಾ. ಬಾ, ಬಾಣ್ಣ, ನಿನಗೆ ವಿಳಾಸ ಬೇಕಾ? ಹಂಗಾದ್ರೆ ಬಾ, ನೀನು ಹುಟ್ಟೋಕೆ ಮುಂಚೆ ಇದ್ದ ವಿಳಾಸಕ್ಕೆ ಕಳಿಸಿಕೊಡ್ತೀನಿ...’ ಅನ್ನುತ್ತಾ ಅವನ ಮೂಗಿನ ಮೇಲೆ ಜೋರಾಗಿ ಗುದ್ದಿದನಂತೆ. ಅವತ್ತಿನಿಂದ ಅವನು ಅವರ ಬಡಾವಣೆಯಲ್ಲಿ ಕಾಣಿಸಿಕೊಂಡಿಲ್ಲವಂತೆ.

“ಹಾಗಾದ್ರೆ ನೀನು ಹುಚ್ಚ ಇರಬೇಕು ಅಂತ ಹೇಗೆ ಹೇಳ್ತೀಯಾ ವಿಶ್ವಾಸ್? ಅವನು ಹುಚ್ಚನಾಗಿದ್ರೆ ಹೊಡೆದರೂ ಅಲ್ಲೇ ಇರ್ತಿದ್ದ.”

ಅದು ಸರೀನೆ. ಆದರೆ ಹಾಗಲ್ಲ ಕೂಡ. ಹೊಡೆದರೆ ದೆವ್ವವೇ ಓಡಿ ಹೋಗುತ್ತದೆ, ಹುಚ್ಚ ಓಡಿ